ದಿನಾಂಕ : .5.2019

ರಿಗೆ,

1. ಮಾ.ಕೇಂದ್ರೀಯ ಗೃಹಸಚಿವರು, ನವ ದೆಹಲಿ.
2. ಮಾ. ಮುಖ್ಯಮಂತ್ರಿ, ಮಹಾರಾಷ್ಟ್ರ ರಾಜ್ಯ.

## ವಿಷಯ : ರಾಷ್ಟ್ರಪ್ರೇಮಿ ಹಾಗೂ ಪ್ರಖರ ಹಿಂದುತ್ವನಿಷ್ಠ ನ್ಯಾಯವಾದಿ ಸಂಜೀವ ಪುನಾಳೆಕರ ಇವರ ಬಂಧನದ ಖಂಡನೆ; ನ್ಯಾಯವಾದಿ ಪುನಾಳೆಕರ ಇವರನ್ನು ಕೂಡಲೇ ಬಿಡುಗಡೆ ಮಾಡಿ !

ಮುಂಬೈಯ ರಾಷ್ಟ್ರಪ್ರೇಮಿ, ಪ್ರಖರ ಹಿಂದುತ್ವನಿಷ್ಠ ಹಾಗೂ ಹಿಂದೂ ವಿಧಿಜ್ಞ ಪರಿಷತ್ತಿನ ರಾಷ್ಟ್ರೀಯ ಕಾರ್ಯದರ್ಶಿಯಾದ ನ್ಯಾಯವಾದಿ ಸಂಜೀವ ಪುನಾಳೆಕರ ಹಾಗೂ ಮಾಹಿತಿ ಹಕ್ಕು ಕಾರ್ಯಕರ್ತ ಶ್ರೀ. ವಿಕ್ರಮ ಭಾವೆ ಇವರನ್ನು ಕೇಂದ್ರೀಯ ತನಿಖಾ ತಂಡ(ಸಿಬಿಐ)ವು ಮೇ 25 ರಂದು ದಾಭೋಲಕರ ಹತ್ಯೆಯ ಪ್ರಕರಣದಲ್ಲಿ ಬಂಧಿಸಿತು. ಡಾ. ನರೇಂದ್ರ ದಾಭೋಲಕರ ಇವರ ಹತ್ಯೆಯ ತನಿಖೆಯು ಸದ್ಯ ಕೇಂದ್ರೀಯ ತನಿಖಾ ತಂಡವು ಮಾಡುತ್ತಿದೆ. ಈ ಪ್ರಕರಣದಲ್ಲಿ ಕಳೆದ 3 ವರ್ಷಗಳಲ್ಲಿ ಸಿಬಿಐ ಅನೇಕ ಅಮಾಯಕ ಹಿಂದೂಗಳನ್ನು ಶಂಕಿತರೆಂದು ಬಂಧಿಸಿತ್ತು. ಈಗ ಈ ಪ್ರಕರಣದಲ್ಲಿ ನ್ಯಾಯವಾದಿ ಪುನಾಳೆಕರ ಇವರನ್ನು 10 ತಿಂಗಳ ಹಿಂದಿನ ಓರ್ವ ಶಂಕಿತ ಆರೋಪಿಯು ನೀಡಿದ ಹೇಳಿಕೆಯ ಮೇರೆಗೆ ಬಂಧಿಸಲಾಗಿದೆ ಎಂದು ವಾರ್ತಾವಾಹಿನಿಯಲ್ಲಿ ನೀಡಿದ ವಾರ್ತೆಯಿಂದ ತಿಳಿದುಬಂದಿದೆ. ಸಿಬಿಐನ ಈ ಕ್ರಮವು ಅತ್ಯಂತ ತಪ್ಪು ಹಾಗೂ ಖಂಡನೀಯವಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ಸಿಬಿಐಯ ನಡೆ ಸಂದೇಹಾಸ್ಪದ ಹಾಗೂ ಹಿಂದುತ್ವವಾದಿಗಳ ಮೇಲೆ ಒತ್ತಡದ ನಿರ್ಮಾಣ ಮಾಡುವಂತಿದೆ. ಹಿಂದುತ್ವವಾದಿ ಎಂದು ಹೇಳಿಕೊಳ್ಳುವ ಸರ್ಕಾರವು ಅಧಿಕಾರದಲ್ಲಿರುವಾಗಲೇ ಇದೆಲ್ಲ ಆಗುತ್ತಿದೆ, ಇದು ನಮ್ಮೆಲ್ಲ ಹಿಂದೂಗಳಿಗೆ ಆಘಾತಕಾರಿಯಾಗಿದೆ.

**ಈ ಪ್ರಸಂಗದಲ್ಲಿ ಗಮನಕ್ಕೆ ಬಂದ ಅಂಶಗಳನ್ನು ಇಲ್ಲಿ ನೀಡುತ್ತಿದ್ದೇವೆ...**

1. ಸಕಾರದಿಂದ ಅನುದಾನ ಅಥವಾ ಭೂಮಿಯನ್ನು ಪಡೆದುಕೊಂಡು ಅದರಲ್ಲಿ ಆಸ್ಪತ್ರೆ ಕಟ್ಟಲಾಗುತ್ತದೆ, ಅದರಲ್ಲಿ ಬಡವರಿಗೆ ಶೇ. 10 ರಷ್ಟು ಮಂಚ ರಿಯಾಯಿತಿ ದರದಲ್ಲಿ ಹಾಗೂ ಶೇ. 20 ರಷ್ಟು ಮಂಚ ಉಚಿತವಿರುಬೇಕು, ಎಂಬ ನಿಯಮವಿದೆ; ಆದರೆ ಅನೇಕ ಜನರಿಗೆ ಈ ಸೌಲಭ್ಯದ ಲಾಭವು ಸಿಗುತ್ತಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಬಡವರ ನ್ಯಾಯಯುತ ಹಕ್ಕುಗಳಿಗಾಗಿ ನ್ಯಾಯವಾದಿ ಪುನಾಳೆಕರ ಇವರು ಮುಂಬೈ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿದ್ದರು. ಇದಕ್ಕೆ ನ್ಯಾಯಾಲಯವು ಆಸ್ಪತ್ರೆಗಳಿಗೆ ಬಡರೋಗಿಗಳಿಗೆ ಮಂಚವು ಕಾಯ್ದಿರಿಸುವಂತೆ ಆದೇಶವನ್ನು ನೀಡಿತು.
2. 11 ಆಗಸ್ಟ್ 2012 ರಂದು ಮುಂಬೈಯ ಆಝಾದ ಮೈದಾನದಲ್ಲಿ ರಜಾ ಅಕಾದಮಿಯ 50 ಸಾವಿರಕ್ಕಿಂತಲೂ ಹೆಚ್ಚು ಮತಾಂಧರು ಗಲಭೆಯೆಬ್ಬಿಸಿದ್ದರು. ಆ ಸಮಯದಲ್ಲಿ ಮತಾಂಧರು ರಾಷ್ಟ್ರೀಯ ಆಸ್ತಿಪಾಸ್ತಿಗೆ ಹಾನಿಯನ್ನುಂಟು ಮಾಡಿದ್ದರು, ಪೋಲೀಸ್ ಹಾಗೂ ಪತ್ರಕರ್ತರ ಮೇಲೆ ದಾಳಿ ಮಾಡಿದ್ದರು, ಅದೇ ರೀತಿ ಎಲ್ಲಕ್ಕಿಂತ ಹೆಚ್ಚು ಗಂಭಿರವೆಂದರೆ ಮಹಿಳಾ ಪೋಲೀಸರ ಮಾನಭಂಗ ಮಾಡಿದ್ದರು. ಈ ಪ್ರಕರಣದಲ್ಲಿ ಗಲಭೆಖೋರರಿಂದ ನಷ್ಟಪರಿಹಾರ ವಸೂಲು ಮಾಡಲು ನ್ಯಾಯವಾದಿ ಪುನಾಳೆಕರ ಇವರು ‘ರಾಷ್ಟ್ರೀಯ ಪತ್ರಕರ್ತರ ಮಂಚ್’ನ ವತಿಯಿಂದ ಮುಂಬೈ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿ ಉಚಿತವಾಗಿ ಹೋರಾಡುತ್ತಿದ್ದಾರೆ. ಅದರಲ್ಲಿಯೂ ನ್ಯಾಯಾಲಯವು ಸಂಬಂಧಪಟ್ಟವರಿಗೆ ನಷ್ಟ ಪರಿಹಾರವನ್ನು ಕೊಡಬೇಕು ಎಂದು ಆದೇಶವನ್ನು ನೀಡಿತು.
3. ಓರ್ವ ಹಿಂದುಳಿದ ವರ್ಗದ ಹುಡುಗನು ಸೆರೆಮನೆಯಲ್ಲಿ ಸಾವನ್ನಪ್ಪಿದನು, ಆತನ ಕುಟುಂಬಕ್ಕೆ ನ್ಯಾಯ ಒದಗಿಸಲೆಂದು ನ್ಯಾಯವಾದಿ ಪುನಾಳೆಕರ ಇವರು ಅವರಿಗೆ ಸಂಪೂರ್ಣವಾಗಿ ಉಚಿತವಾಗಿ ಸಹಾಯವನ್ನು ನೀಡಿದರು.
4. ಆದಿವಾಸಿ ಸಮಾಜದ, ಇಟ್ಟಿಗೆಭಟ್ಟಿಯಲ್ಲಿ ಕೆಲಸವನ್ನು ಮಾಡುವ ಓರ್ವ 16 ವರ್ಷದ ಹುಡುಗನನ್ನು ರಾಯಗಡ ಜಿಲ್ಲೆಯ ಪೋಲೀಸರು ಒಂದು ಕೊಲೆಯ ಅಪರಾಧದಲ್ಲಿ ಬಂಧಿಸಿದ್ದರು ಹಾಗೂ ಆತನ ವಯಸ್ಸು 22 ಇದೆ ಎಂದು ತೋರಿಸಿದ್ದರು. ಆತ ನಿರಪರಾಧಿ ಎಂದು ತಿಳಿದಾಗ ನ್ಯಾಯವಾದಿ ಪುನಾಳೆಕರ ಇವರು ಆತ ಅಪ್ರಾಪ್ತ ಎಂದು ನ್ಯಾಯಾಲಯದ ಗಮನಕ್ಕೆ ತಂದು ಕೊಟ್ಟರು ಹಾಗೂ ಆತನ ಬಿಡುಗಡೆಯೂ ಆಯಿತು.
5. ಮಹಾರಾಷ್ಟ್ರ ಸರ್ಕಾರವು ಸರಕಾರಿಕರಣಗೊಳಿಸಿದ ಶ್ರೀ ಸಾಯಿಬಾಬಾ ಸಂಸ್ಥಾನ, ಶಿರ್ಡಿ; ಪಶ್ಚಿಮ ಮಹಾರಾಷ್ಟ್ರ ದೇವಸ್ಥಾನ ಸಮಿತಿ, ಕೊಲ್ಲಾಪುರ; ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ, ಮುಂಬೈ; ಶ್ರೀ ವಿಠ್ಠಲ-ರುಕ್ಮಿಣಿ ದೇವಸ್ಥಾನ ಸಮಿತಿ, ಪಂಢರಾಪುರ; ಶ್ರೀ ತುಳಜಾಭವಾನಿ ದೇವಸ್ಥಾನ, ತುಳಜಾಪುರ; ಇದರೊಂದಿಗೆ ಅನೇಕ ದೇವಸ್ಥಾನದಲ್ಲಿಯ ವ್ಯವಸ್ಥಾಪನೆಯ ಭ್ರಷ್ಟಾಚಾರದ ಪ್ರಕರಣಗಳನ್ನು ನ್ಯಾಯವಾದಿ ಪುನಾಳೆಕರ ಇವರು ಬಹಿರಂಗ ಪಡಿಸಿದರು.
6. ಇದರೊಂದಿಗೆ ಮಾಲೆಗಾವ ಸ್ಫೋಟದ ಪ್ರಕರಣದಲ್ಲಿ ‘ಹಿಂದೂ ಭಯೋತ್ಪಾದನೆ’ ಎಂಬ ಕಾಂಗ್ರೆಸ್‌ನ ಸಂಕಲ್ಪನೆಯ ಬುರಖಾವನ್ನು ಕಿತ್ತೊಗೆಯುವ ಕೆಲಸವನ್ನು ಪ್ರಪ್ರಥಮಬಾರಿ ನ್ಯಾಯವಾದಿ ಸಂಜೀವ ಪುನಾಳೆಕರ ಇವರು ವಿವಿಧ ಹಂತಗಳಲ್ಲಿ ವೈಚಾರಿಕ ಪ್ರತಿವಾದದ ಮೂಲಕ ಮಾಡಿದರು. ಈ ಪ್ರಕರಣದಲ್ಲಿ 5 ಆರೋಪಿಗಳಿಗೆ ನ್ಯಾಯವಾದಿ ಪುನಾಳೆಕರ ಇವರು ವಕೀಲರೆಂದು ಕೆಲಸವನ್ನೂ ಮಾಡಿ ಅದರಲ್ಲಿ ಕೆಲವರಿಗೆ ಜಾಮೀನು ಸಹ ಸಿಗುವಂತೆ ಮಾಡಿದ್ದಾರೆ.
7. 2007 ರಲ್ಲಿ ಮಡಗಾವ್ (ಗೋವಾ) ದಲ್ಲಿ ನಡೆದ ಸ್ಫೋಟದ ಪ್ರಕರಣದಲ್ಲಿ ಸನಾತನದ 6 ಸಾಧಕರನ್ನು ಬಂಧಿಸಲಾಗಿತ್ತು. ಅದರ ಖಟ್ಲೆಯನ್ನು ನ್ಯಾಯವಾದಿ ಸಂಜೀವ ಪುನಾಳೆಕರ ಇವರು ನಡೆಸಿ ಅವರೆಲ್ಲರ ನಿರಪರಾಧಿತನವನ್ನು ನ್ಯಾಯಾಲಯದಲ್ಲಿ ಸಿದ್ಧ ಮಾಡಿ ಆರೂ ಮಂದಿಯನ್ನು ಬಿಡುಗಡೆ ಮಾಡಿದರು.
8. ಡಾ. ದಾಬೋಲಕರ, ಕಾ. ಗೋವಿಂದ ಪಾನಸಾರೆ, ಪತ್ರಕರ್ತೆ ಗೌರಿ ಲಂಕೇಶ ಇವರ ಹತ್ಯೆ ಪ್ರಕರಣಗಳ ತನಿಖೆ ನಡೆಸುವ

ಸಿಬಿಐ ಅಧಿಕಾರಿ ನಂದಕುಮಾರ ನಾಯರ ಇವರ ಕುಕೃತ್ಯಗಳ ಬಗ್ಗೆ ಕೇರಳ ಉಚ್ಚ ನ್ಯಾಯಾಲಯವು 'ಈ ಅಧಿಕಾರಿ ಸಿಬಿಐಗೆ ಕಲಂಕವಾಗಿದ್ದಾರೆ', ಎಂಬ ಮಾತುಗಳಲ್ಲಿ ಚಾಟಿ ಬೀಸಿತ್ತು, ಎಂಬುದನ್ನು ನ್ಯಾಯವಾದಿ ಪುನಾಳೆಕರ ಇವರು ಬಯಲಿಗೆಳೆದು ಸಿಬಿಐ ಇಂತಹ ಕಲಂಕಿತ ಅಧಿಕಾರಿಗಳು ಹಿಂದುತ್ವವಾದಿಗಳಿಗೆ ಯಾವ ರೀತಿ ಸಿಲುಕಿಸುತ್ತಿದ್ದಾರೆ, ಎಂಬ ಸಂಚನ್ನು ಹೊರಗೆಡವಿದ್ದರು.

9. ಈ ಪ್ರಕರಣದಲ್ಲಿ ಕೆಲವು ಹಿಂದುತ್ವವಾದಿ ಕಾರ್ಯಕರ್ತರಿಗೆ ಹಣದ ಆಮಿಷ ತೋರಿಸಿ ಸನಾತನ ಸಂಸ್ಥೆಯ ಹೆಸರು ಉಲ್ಲೇಖಿಸುವಂತೆ ಉದ್ಯುಕ್ತಗೊಳಿಸುವ ಪ್ರಕರಣದಲ್ಲಿ ಅದೇ ರೀತಿ ಒಂದು ಹೆಸರಾಂತ ಆಂಗ್ಲ ವಾರ್ತಾವಾಹಿನಿ ಮಾಡಿದ 'ಸ್ಟಿಂಗ್ ಆಪರೇಶನ್'ನ ಸುಳ್ಳುತನವನ್ನು ನ್ಯಾಯವಾದಿ ಪುನಾಳೆಕರ ಇವರು ಬಯಲಿಗೆಳೆದಿದ್ದರು. ನ್ಯಾಯವಾದಿ ಪುನಾಳೆಕರ ಇವರಿಗೂ ಸನಾತನ ಸಂಸ್ಥೆಯ ವಿರುದ್ಧ ಮಾತನಾಡಲು 2 ಕೋಟಿ ರೂಪಾಯಿಗಳ ಆಮಿಷ ತೋರಿಸಿರುವುದಾಗಿ ಅವರು ಹೇಳಿದ್ದರು.

10. ನಗರ ನಕ್ಸಲವಾದ, ಕರ್ನಾಟಕದಲ್ಲಾದ 8 ಹಿಂದುತ್ವನಿಷ್ಠರ ಹತ್ಯೆ ಪ್ರಕರಣದಲ್ಲಿ 'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ'ದ ಆಬಿದ ಪಾಶಾ ಮೇಲೆ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ನ್ಯಾಯವಾದಿ ಸಂಜೀವ ಪುನಾಳೆಕರರವರು ನ್ಯಾಯಾಲಾಯದಲ್ಲಿ ಅರ್ಜಿ ದಾಖಲಿಸಿದ್ದರು.

11. ಅಂಧಶ್ರದ್ಧಾ ನಿರ್ಮೂಲನ ಸಮಿತಿಯಂತಹ (ಅಂನಿಸ) ಪ್ರಗತಿಪರ ಸಂಘಟನೆಗಳು ಮಾಡಿದ ಭ್ರಷ್ಟಾಚಾರ, ಅವರು ಅಕ್ರಮವಾಗಿ ಸಂಗ್ರಹಿಸಿದ ವಿದೇಶ ನಿಧಿ ಈ ಪ್ರಕರಣಗಳು ಬಯಲಿಗೆಳೆಯಲು ನ್ಯಾಯವಾದಿ ಪುನಾಳೆಕರ ಇವರು ಸಹಾಯ ಮಾಡಿದ್ದರು, ಅದರ ಪರಿಣಾಮದಿಂದ ಧಾರ್ಮಿಕ ದತ್ತಿ ಆಯುಕ್ತರು ಅಂನಿಸದಂತಹ ಸಂಸ್ಥೆಗೆ 'ಕಾರಣ ಕೇಳಿ' ನೋಟಿಸ್ ಕಳುಹಿಸಿದ್ದರು.

12. ಶ್ರೀ. ವಿಕ್ರಮ ಭಾವೆಯವರು 'ಮಾಲೇಗಾವ್ ಸ್ಫೋಟದ ಹಿಂದಿರುವ ಅದೃಶ್ಯ ಕೈ' (ಮರಾಠಿ) ಎಂಬ ಪುಸ್ತಕ ಬರೆದು ಮಾಲೇಗಾವ್ ಸ್ಫೋಟದ ನಿಜವಾದ ಸ್ವರೂಪವನ್ನು ಬಯಲಿಗೆಳೆದಿದ್ದರು ಹಾಗೂ ಅನೇಕ ಸ್ಥಳೀಯ ಸಹಕಾರ ಸಂಸ್ಥೆಗಳಲ್ಲಿನ ಭ್ರಷ್ಟಾಚಾರಗಳನ್ನು ಮಾಹಿತಿ ಹಕ್ಕು ಅಧಿಕಾರದ ಮೂಲಕ ಬಯಲಿಗೆಳೆದಿದ್ದರು.

ಮೇಲಿನ ಎಲ್ಲ ವಿಷಯಗಳಿಂದ, ನ್ಯಾಯವಾದಿ ಪುನಾಳೆಕರ ಇವರು ಅನೇಕ ಸಾಮಾಜಿಕ ಮತ್ತು ರಾಷ್ಟ್ರೀಯ ಪ್ರಕರಣದಲ್ಲಿನ ಭ್ರಷ್ಟಾಚಾರ, ರಾಷ್ಟ್ರ ಹಾಗೂ ಧರ್ಮ ಇವುಗಳ ಮೇಲಾಗುವ ಆಘಾತಗಳು ಮುಂತಾದವುಗಳನ್ನು ತಡೆಯಲು ಪ್ರಯತ್ನಿಸಿದ್ದಾರೆ ಎಂಬುದು ಗಮನಕ್ಕೆ ಬರುತ್ತದೆ. ಭಯೋತ್ಪಾದಕ ಯಾಕುಬ್ ಮೆಮನ್, ಅಫ್ಜಲಗುರು, ಅಜ್ಮಲ ಕಸಾಬ ಇಂತಹ ದೇಶದ್ರೋಹಿಗಳ ಪರವಾಗಿ ವಾದ ಮಂಡಿಸಲು ವಕೀಲರನ್ನು ನೇಮಿಸಲಾಗುತ್ತದೆ, ಹೀಗಿರುವಾಗ ಶಂಕಿತರೆಂದು ಬಂಧಿತರಾದ ಹಿಂದೂಗಳ ಪರವಾಗಿ ವಾದ ಮಂಡಿಸಲು ನ್ಯಾಯವಾದಿ ಪುನಾಳೆಕರ ಇವರು ವಕಾಲತ್ತುಪತ್ರವನ್ನು ತೆಗೆದುಕೊಂಡರು, ಇದರಲ್ಲಿ ತಪ್ಪೇನಿದೆ ? ಒಬ್ಬ ವಕೀಲರು ನಿರಪರಾಧಿಯ ಪಕ್ಷವನ್ನು ವಹಿಸಲು ಪ್ರಯತ್ನಿಸುತ್ತಾ ತಮ್ಮ ಸಂವಿಧಾನಬದ್ಧ ಅಧಿಕಾರವನ್ನು ಬಳಸಿದ್ದಾರೆ. ಆದರೂ ಅವರನ್ನು ಷಡ್ಯಂತ್ರದ ಮೂಲಕ ಬಂಧಿಸಿ ಉದ್ದೇಶಪೂರ್ವಕವಾಗಿ ಹಿಂದೂಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಗುತ್ತಿದೆ. ಇದು ಅವರ ಕರ್ತವ್ಯದ ಮೇಲೆ ಮಾಡಿ ಗದಾಪ್ರಹಾರದಂತಿದೆ. ಆದುದರಿಂದ ಸಿಬಿಐ ಮಾಡಿದ ಈ ಕೃತ್ಯ ಸಂವಿಧಾನದ ಕತ್ತು ಹಿಸುಕುವಂತಾಗಿದೆ.

**ಹಾಗಾಗಿ ನಾವು ಈ ಮುಂದಿನವುಗಳನ್ನು ಆಗ್ರಹಿಸುತ್ತಿದ್ದೇವೆ,**

1. ಇಡೀ ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕು ಹಾಗೂ ಈ ಪ್ರಕರಣದಲ್ಲಿ ಸಿಬಿಐ ನಿಲುವಿನ ಬಗ್ಗೆಯೂ ತನಿಖೆಯಾಗಬೇಕು.
2. ಸಿಬಿಐ ಅಧಿಕಾರಿ ನಂದಕುಮಾರ ನಾಯರ ಇವರಿಂದ ಡಾ. ದಾಭೋಲಕರ ಪ್ರಕರಣದ ತನಿಖೆಯನ್ನು ಹಿಂಪಡೆದು ಅದನ್ನು ಇತರ ನಿಷ್ಪಕ್ಷಪಾತ ಅಧಿಕಾರಿಗೆ ಒಪ್ಪಿಸಬೇಕು ಅಥವಾ ಆ ತನಿಖೆಯನ್ನು ನ್ಯಾಯಾಲಯದ ನಿರೀಕ್ಷಣೆಯಲ್ಲಿ ಮಾಡಬೇಕು.
3. 'ಮೀಡಿಯಾ ಟ್ರಯಲ್' ಮೂಲಕ ನ್ಯಾಯವಾದಿ ಸಂಜೀವ ಪುನಾಳೆಕರ ಮತ್ತು ವಿಕ್ರಮ ಭಾವೆ ಇವರ ಮಾನಹಾನಿಯಾಗುವುದನ್ನು ಹಾಗೂ ಹಿಂದುತ್ವನಿಷ್ಠರ ದಮನವನ್ನು ನಿಲ್ಲಿಸಬೇಕು.
4. 'ಸಿಬಿಐ'ನ ಹಿಂದಿನ ಕಲಂಕಿತ ಇತಿಹಾಸವನ್ನು ನೋಡಿದಾಗ ಹಿಂದುತ್ವನಿಷ್ಠ ಕಾರ್ಯಕರ್ತರನ್ನು ಷಡ್ಯಂತ್ರದಿಂದ ಸಿಲುಕಿಸಿದ ಉದಾಹರಣೆಗಳಿವೆ, ಈ ಪ್ರಸಂಗದಲ್ಲಿಯೂ ಇಂತಹ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಹಾಗಾಗಿ ಮೇಲಿನ ಎಲ್ಲ ವಿಷಯಗಳನ್ನು ನೋಡಿದಾಗ ಅಮಾಯಕ ನ್ಯಾಯವಾದಿ ಸಂಜೀವ ಪುನಾಳೆಕರ ಹಾಗೂ ವಿಕ್ರಮ ಭಾವೆ ಇವರನ್ನು ಕೂಡಲೇ ಗೌರದಿಂದ ಬಿಡುಗಡೆ ಮಾಡಬೇಕು.

ಇದನ್ನು ಆಗ್ರಹಿಸಲು..................ಈ ದಿನದಂದು .......................... ಈ ಸ್ಥಳದಲ್ಲಿ ...... ಆಂದೋಲನ ಮಾಡಲಾಯಿತು.

ತಮ್ಮ ಸವಿನಯ

ಹಿಂದೂ ಜನಜಾಗೃತಿ ಸಮಿತಿ ವತಿಯಿಂದ
ಸಂಪರ್ಕ :